ನೆಲದಿಂದ, ಗೆದ್ದಲು, ಓಡುಹುಳು, ಮಿಡತೆ ಇತ್ಯಾದಿ ಕೀಟಗಳನ್ನು ಕುಕ್ಕಿ ಕಬಳಿಸುತ್ತಿದ್ದುದು ಸ್ಪಷ್ಟವಾಗಿ ಗೋಚರಿಸಿತು.

ಪಶ್ಚಿಮ ಘಟ್ಟದಲ್ಲಿ ವಿರಳವಾಗಿ ಕಂಡುಬರುವ ಈ ಚಂದ್ರಮುಕುಟ ಹಕ್ಕಿ, ಮರಕುಟುಕವಂತೂ ಅಲ್ಲವೇ ಅಲ್ಲ. ಕಾರಣ ನಮ್ಮ ದಟ್ಟ ಅರಣ್ಯದ ಮರಕುಟುಕ ಮರ ಕುಟ್ಟಲು ಶುರು ಮಾಡಿದರೆ ತಮಟೆ ಹೊಡೆದಂತೆ ಕೇಳಿಸುತ್ತದೆ. ಈ ಚಂದ್ರಮುಕುಟ ಹಕ್ಕಿ ಅದೇ ವೇಗದಲ್ಲಿ ನೆಲದ ಮೇಲೆ ನಿಂತು ನೆಲವನ್ನು ಕುಟ್ಟಿದರೂ ಕಟ ಕಟ ನಗಾರಿ ಸದ್ದು ಬರುವುದಿಲ್ಲ. ಅದಕ್ಕೇ ಇದು ನೆಲಕುಟುಕ.

ಚಂದ್ರಮುಕುಟ ಸಾಮಾನ್ಯವಾಗಿ ಬೆಟ್ಟಗುಡ್ಡದ ಕಲ್ಲಿನ ಬಿರುಕು, ಹಳೆಮರಗಳ ಪೊಟರೆಯಲ್ಲಿ ಗೂಡು ಮಾಡುತ್ತದೆ. ಎಲೆ, ಕಸ ಕಡ್ಡಿ, ಹುಲ್ಲು, ಪೇಪರ್, ಕೂದಲಿನಿಂದ ನಿರ್ಮಿಸುವ ಗೂಡಿನಲ್ಲಿ 5 ರಿಂದ 6 ಬಿಳಿ ಮೊಟ್ಟೆಗಳನ್ನು ಇಡುತ್ತದೆ. ಮೊಟ್ಟೆಗೆ ಕಾವು ಕೊಡುವ ಸಂಪೂರ್ಣ ಜವಾಬ್ದಾರಿ ಹೆಣ್ಣಿನದು. ಮಿಂಚುಳ್ಳಿಗಳ ಕೊಕ್ಕು ನೆಲದ ಬದುವಿನಲ್ಲಿ ಬಿಲ ಕೊರೆಯುವಷ್ಟು ಬಲಿಷ್ಠವಾಗಿರುತ್ತವೆ; ಆದರೆ ಚಂದ್ರಮುಕುಟದ ಕೊಕ್ಕು ದುರ್ಬಲ. ವೇಗವಾಗಿ ಹಾರಲಾಗದ ಈ ಹಕ್ಕಿ ದುರ್ಬಲ ರೆಕ್ಕೆಗಳನ್ನು, ಚಿಟ್ಟೆಗಳ ರೀತಿಯಲ್ಲಿ ಬೀಸುತ್ತಾ ನಿಧಾನವಾಗಿ ಹಾರುತ್ತದೆ.

ಚಂದ್ರಮುಕುಟ ಎಂದೂ ಗುಂಪಿನಲ್ಲಿ ವಾಸಿಸುವುದಿಲ್ಲ. ಏಕಾಂಗಿಯಾಗಿ ಇಲ್ಲವೇ ಜೋಡಿಗಳಲ್ಲಿ ಮಾತ್ರ ಕಾಣಸಿಗುತ್ತದೆ. ಮರಿ ಮಾಡುವ ಸಮಯದಲ್ಲಿ 'ಊಫ್... ಊಫ್' ಎಂದು ಲಯಬದ್ಧವಾಗಿ ಹಾಡುವುದರಿಂದ, ಇಂಗ್ಲಿಷಿನಲ್ಲಿ 'ಊಫೆ' ಎಂದು ನಾಮಕರಣ ಮಾಡಿದ್ದಾರೆ. ಇತರ ಪಕ್ಷಿಗಳಾದ, ಮೈನಾ, ಟಿಟ್ಟಿಬಗಳು ಹತ್ತಿರ ಬಂದರೆ 'ಕಿರ್.. ಕಿರ್' ಎಂದು ಸಣ್ಣದಾಗಿ ಕೂಗುತ್ತಾ ಇದು ನಾಲ್ಕಾರು ಮಾರು ಹಾರುತ್ತದೆ. ಪರಸ್ಪರ ಜಗಳವಾಡುವಾಗ ಮತ್ತು ಯಾವುದೇ ಅಪಾಯಕಾರಿ ಸಂದೇಶ ಬಂದಾಗಲೂ ಇವು ನೆತ್ತಿಯ ಜುಟ್ಟು ಬಿಚ್ಚಿಕೊಂಡು 'ಕಿರ್'ಗುಡುತ್ತವೆ. ಒಂದು ವಿಶೇಷತೆ ಎಂದರೆ, ಪ್ರತಿ ಬಾರಿ 'ಕಿರ್' ಎಂದು ಕೂಗಿದಾಗಲೂ ಜಪಾನಿಯರ ಮಡಚು ಬೀಸಣಿಗೆಯನ್ನು ಹೋಲುವ ಇದರ ಚಂದ್ರಮುಕುಟ, ಜುಟ್ಟನ್ನು ಬಿಚ್ಚಿದಂತೆ ಬಿಚ್ಚಿಕೊಳ್ಳುತ್ತದೆ. ಆಹಾರಕ್ಕಾಗಿ ನೆಲ ಕುಕ್ಕುವ ಸಮಯದಲ್ಲಿ, ಇದಕ್ಕೆ ಎರಡು ಕೊಕ್ಕುಗಳು ಇರುವಂತೆ ಭಾಸವಾಗುತ್ತದೆ. ವಾಸ್ತವವಾಗಿ ಇದಕ್ಕಿರುವುದು ಒಂದೇ ಕೊಕ್ಕಾದರೂ, ಬೀಸಣಿಗೆಯಂತಹ ಪುಕ್ಕಗಳನ್ನು ಅದು ಮಡಚಿದಾಗ, ನಮಗೆ ಮತ್ತೊಂದು ಕೊಕ್ಕಿರುವಂತೆ ಭಾಸವಾಗುತ್ತದೆ. ಗೂಡಿನಲ್ಲಿ ತಲೆಯಾಡಿಸುತ್ತಾ 'ಸಿರ್... ಸಿರ್ ಎಂದು ಶಬ್ದ ಮಾಡುತ್ತಾ ಕುಳಿತ ಮರಿಗಳು, ಗೂಡಿನ ಬಳಿಗೆ ಅಪರಿಚಿತರ ಆಗಮನವಾದರೆ ತಮ್ಮ ಬಾಲದಲ್ಲಿರುವ ಗ್ರಂಥಿಗಳಿಂದ ದುರ್ವಾಸನೆ ಹೊಮ್ಮಿಸುತ್ತವೆ!

ಈ ಹಕ್ಕಿಯನ್ನು 'ಹುಲಿ ಪಟ್ಟೆ ಹಕ್ಕಿ' ಎಂದೂ ಕರೆಯುವವರಿದ್ದಾರೆ. ಪಟ್ಟೆ ಕಪ್ಪು ಬಿಳುಪಾದರೂ ನೋಡಲು ಜೀಬ್ರಾ ಪಟ್ಟೆಯಂತೆ ಕಾಣಿಸುತ್ತದೆ. ಅತ್ಯಾಕರ್ಷಕವಾದ ಇದರ ಜುಟ್ಟು ಪಿಕಾಸಿಯನ್ನು ಹೋಲುತ್ತದೆ. ಬಾಗಿದ ನವಿರಾದ ಕೊಕ್ಕುಗಳಿಂದ ಹುಳು, ಹುಪ್ಪಟೆಗಳಿಗಾಗಿ ನೆಲ ಕುಟ್ಟುವಾಗ ಥೇಟ್ ಪಿಕಾಸಿಯಂತೆಯೇ ಕಾಣುತ್ತದೆ.

ಇದರ ವೈಜ್ಞಾನಿಕ ಹೆಸರು ಉಪುಪಾ ಇಪೋಪ್ಸ್. ಉಪುಪಿಡೇ ವರ್ಗಕ್ಕೆ ಸೇರಿದ ಇದರ ಆಂಗ್ಲ ಹೆಸರು 'ಹೂಪೋ'. ಕಾವು ಕೊಡಲು ಕುಳಿತ ಹೆಣ್ಣು ಹಕ್ಕಿಗೆ ಗಂಡು ಮುತುವರ್ಜಿಯಿಂದ ಆಹಾರ ಸರಬರಾಜು ಮಾಡುತ್ತದೆ. ಮರಿಗಳಿಗೆ ಕೊಕ್ಕಿನ ತಳಭಾಗ ಪೂರ್ತಿ ಬಿಳಿಯಾಗಿರುವುದರಿಂದ ಕತ್ತಲಲ್ಲಿ ಆಹಾರ ತೂರಿಸಲು ಅಪ್ಪ– ಅಮ್ಮನಿಗೆ ಬಹಳ ಸುಲಭ. ತಿಳಿ ಕಂದು ಬಣ್ಣದ ದೇಹ, ಪಟ್ಟೆ ರೆಕ್ಕೆ, ಬಾಲವೂ ಸಹ ಪಟ್ಟೆ; ಕೆಳ ಹೊಟ್ಟೆ ತುಸು ಬಿಳಿ. ತಲೆಯ ಮೇಲೆ ಜಪಾನಿ ಬೀಸಣಿಗೆಯಂತಹ ಕಿರೀಟದಲ್ಲಿ ಬಿಳಿ–ಕಪ್ಪು ಅಂಚುಳ್ಳ ಗರಿಗಳಿರುತ್ತವೆ. ಕೀಟಗಳನ್ನು ಕುಕ್ಕಿ ತಿನ್ನುವ ಇವು 'ರೈತನ ಆಪ್ತಮಿತ್ರ'ನೆಂದೇ ಹೇಳಬಹುದು. ಸಂಸ್ಕೃತ ಮತ್ತು ಉರ್ದು ಸಾಹಿತ್ಯದಲ್ಲಿ ಚಿರಪರಿಚಿತ ಹಕ್ಕಿಯಿದು!





